ಸಂಭಾಷಣೆ ಬರೆಯಲು ನನ್ನನ್ನು ಮದರಾಸಿಗೆ ಕರೆಸಿಕೊಂಡಿತು ಜೋಡಿ. ಅಷ್ಟರಲ್ಲಾಗಲೇ ನನ್ನ ಮೂರುನಾಲ್ಕು ಕೃತಿಗಳನ್ನು ಸಿದ್ಧಲಿಂಗಯ್ಯ ಸಿನಿಮಾ ಮಾಡಿದ್ದರು. ಅವಕ್ಕೆ ಸಂಭಾಷಣೆ ಕೂಡ ನನ್ನದೆ. ಮುಖ್ಯವಾಗಿ ಪುಟ್ಟಣ್ಣ ಕಣಗಾಲರು ಕರೆಸಿಕೊಂಡು, 'ಅಮೃತ ಘಳಿಗೆ' ಚಿತ್ರಕ್ಕೆ ಸಂಭಾಷಣೆ ಬರೆಸಿದ್ದರು. ಹೀಗಾಗಿ, ದೊರೆ–ಭಗವಾನರೂ ಕರೆಸಿಕೊಂಡರೆನಿಸುತ್ತದೆ. ಅವರೂ ಹೊಸತನಕ್ಕಾಗಿ ತುಡಿಯುವವರು. ಕಾದಂಬರಿ ಕೊಟ್ಟು ಓದಿಸಿದರು. ಸ್ತ್ರೀಸ್ವಾತಂತ್ರ್ಯದ ಬಗೆಗಿನ ವಸ್ತುವಾದ್ದರಿಂದ ನನಗೂ ಇಷ್ಟವಾಯಿತು. ಅನಂತ್–ಲಕ್ಷ್ಮಿ ಜೋಡಿ ಬೇರೆ. ಆದರೆ, ನಾನು ಬರೆಯುವುದು ತ.ರಾ.ಸು.ಗೆ ಇಷ್ಟವಾಗಲಿಲ್ಲವೆಂದೂ ನಿರ್ದೇಶಕರು ಅವರನ್ನು ಕನ್ವಿನ್ಸ್ ಮಾಡಿದರೆಂದೂ ತಿಳಿಯಿತು. ನಾನೇನೂ ವಿಚಲಿತನಾಗಲಿಲ್ಲ. ದುರ್ಗದ ಕಾದಂಬರಿಕಾರನ ಸಿನಿಮಾಕ್ಕೆ ದುರ್ಗದ ಮತ್ತೊಬ್ಬ ಕಾದಂಬರಿಕಾರ ಸಂಭಾಷಣೆ ಬರೆಯುವುದು ಹೆಗ್ಗಳಿಕೆಯಲ್ಲವೆ ಎಂಬ ಖುಷಿ ನನ್ನದು. ಹುಮ್ಮಸ್ಸಿನಿಂದಲೇ ಬರೆದೆ. ತ.ರಾ.ಸು. ಅವರಿಂದ ಬೆನ್ನು ತಟ್ಟಿಸಿಕೊಳ್ಳುವ ಚಪಲವೂ ಇತ್ತು. ಮದರಾಸಿಗೆ ಹೋಗಿ ರೀಡಿಂಗ್ ಕೊಟ್ಟೆ. ಒಂದೇ ಸಿಟಿಂಗ್‌ಗೆ 'ಓಕೆ' ಆಯಿತು. ಸಿನಿಮಾ ರಿಲೀಸ್ ಆಯಿತು, ಹಿಟ್ ಆಯಿತು. ನನ್ನ ಬೆನ್ನು ತಟ್ಟಲು ಆಗ ತ.ರಾ.ಸು. ಅವರೇ ಇರಲಿಲ್ಲ. ನನಗೆ ಹೆಚ್ಚಿನ ಖುಷಿಯಾಗಲೇ ಇಲ್ಲ. ಹೀಗೆ ಅನಿರೀಕ್ಷಿತವಾದದ್ದು ಏನೇನೋ ಆಯಿತು.

★★★

ತ.ರಾ.ಸು. ಅವರ 'ಮಸಣದ ಹೂವು' ಕೃತಿಯನ್ನು ಪುಟ್ಟಣ್ಣ ಸಿನಿಮಾಕ್ಕೆ ಎತ್ತಿಕೊಂಡರು. ಚಿತ್ರೀಕರಣದ ನಡುವೆಯೇ ತೀರಿಕೊಂಡರು. ಅನಂತರ ಕೆ.ಎಸ್.ಎಲ್. ಸ್ವಾಮಿ (ರವಿ) ಚಿತ್ರ ಪೂರೈಸಿದರು. ಹಲವು ವರ್ಷಗಳ ಬಳಿಕ ತ.ರಾ.ಸು. ಅವರ ಮೂರು ಕಾದಂಬರಿಗಳನ್ನು ಆಧರಿಸಿ 'ಆಕಸ್ಮಿಕ' ಎಂಬ ಚಿತ್ರವನ್ನು ನಿರ್ದೇಶಕ ಟಿ.ಎಸ್. ನಾಗಾಭರಣ ತೆರೆಗೆ ತಂದರು. ಜಾಳುಜಾಳಾದ ಕಥೆಯಾದ್ದರಿಂದ ಡಾ. ರಾಜ್ ಇದ್ದರೂ ಚಿತ್ರ ಮುಗ್ಗರಿಸಿತು. ಆದರೆ, ಸ್ವರ ಮಾಂತ್ರಿಕ ಹಂಸಲೇಖ ಬರೆದ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಎಂಬ ಹಾಡು ನಾಡಗೀತೆಯಂತೆ ಪ್ರೇಕ್ಷಕರ ಮನ ಸೆಳೆದು ಚಿತ್ರದ ಓಟಕ್ಕೆ ಇಂಬು ಕೊಟ್ಟಿತು. ಆದರೆ, ಈಗ ಕನ್ನಡ ಕಾದಂಬರಿಗಳಿಗೆ ಹಿಂದಿನಷ್ಟು ಬೇಡಿಕೆ ಇಲ್ಲ. ಈಗೆಲ್ಲ ರಿಮೇಕ್ ದಾಸರು. ಇಲ್ಲವೆ, ತಾವೇ ಹತ್ತಾರು ಪರಭಾಷಾ ಸಿನಿಮಾ ನೋಡಿ ಕಥೆ ಹೊಸೆಯಬಲ್ಲ ಚಾಣಾಕ್ಷರು. ಈಗ ಯಾವ ನಿರ್ದೇಶಕರಿಗೂ ಓದುವ ಅಭಿರುಚಿ ಇಲ್ಲ. ಸಿನಿಮಾ ನಾಯಕರಂತೂ ಅಕ್ಷರ ಶತ್ರುಗಳು. ಮತ್ತೆ ಹೊಸಗಾಳಿ ಬೀಸಬೇಕಿದೆ. ಈಗಲೂ ತ.ರಾ.ಸು. ಅವರು ತಮ್ಮ ಕೃತಿಗಳಿಂದ ಅಜರಾಮರ. ಸತ್ತಮೇಲೂ ತಮ್ಮ ಕೃತಿಗಳಿಂದ ಜನಮಾನಸದಲ್ಲಿ ಬದುಕಿದ್ದಾರೆ.


### ಬಿ.ಎಲ್. ವೇಣು

ನಾಲ್ಕು ದಶಕಗಳಿಂದ ಕತೆ, ಕಾದಂಬರಿ, ಸಿನಿಮಾ–ಧಾರಾವಾಹಿಗಳ ಕತೆ, ಸಂಭಾಷಣೆಗಳ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಲೇಖಕ ಬಿ.ಎಲ್. ವೇಣು. ಏಳು ಐತಿಹಾಸಿಕ ಕಾದಂಬರಿಗಳು ಸೇರಿದಂತೆ 29 ಕಾದಂಬರಿಗಳನ್ನು ಬರೆದಿದ್ದಾರೆ. ಅವರ ಐತಿಹಾಸಿಕ ಕಾದಂಬರಿ 'ಗಂಡುಗಲಿ ಮದಕರಿನಾಯಕ' ಅಪಾರ ಜನಮನ್ನಣೆ ಗಳಿಸಿದೆ. 'ಲೋಕದಲ್ಲಿ ಜನಿಸಿದಾ ಬಳಿಕ...' ಅವರ ಆತ್ಮಕತೆ. ಅವರ ಸುಮಾರು 66 ಕೃತಿಗಳು ಪ್ರಕಟಗೊಂಡಿದ್ದು, 15 ಕೃತಿಗಳು ಸಿನಿಮಾ ಆಗಿವೆ. 66 ಸಿನಿಮಾಗಳಿಗೆ ಸಂಭಾಷಣೆ ಬರೆದಿದ್ದಾರೆ. ಆರೋಗ್ಯ ಇಲಾಖೆಯಲ್ಲಿ ಕಚೇರಿ ಅಧೀಕ್ಷಕರಾಗಿ ನಿವೃತ್ತರು.